ಓ ಎಸ್ ನಂ21/2016
ಡಿ. ಡಬ್ಲ್ಯೂ : 1

ದಿ: 4.02.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಪಾಟೀ ಸವಾಲು : ವಾದಿ ಪರ ಶ್ರೀ ಎಂ ಎಸ್ ಎಸ್ ವಕೀಲರಿಂದ :

ಈ ದಾವೆಯನ್ನು ಹೂಡುವ ಮುಂಚೆ ವಾದಿ ನಮ್ಮ ಮೇಲೆ ಓ ಎಸ್ 154/2007 ನ್ನು ಹೂಡಿದ್ದರು ಎಂದರೆ ಸರಿ. ಸದರಿ ದಾವೆ ಶಾಶ್ವತ ನಿರ್ಬಂಧಕಾಜ್ಞೆ ಕೋರಿ ಹೂಡಲಾಗಿತ್ತು ಎಂದರೆ ಸರಿ. ಅದು ನಮ್ಮಂತೆ ಆಗಿತ್ತು. ವಾದಿಗಳು ಸದರಿ ದಾವೆಯನ್ನು ಮತ್ತೊಂದು ದಾವೆಯನ್ನು ಹೂಡಲು ಹಿಂದಕ್ಕೆ ಪಡೆಯಲಾಗಿರುತ್ತದೆ ಎಂದರೆ ಗೊತ್ತಿಲ್ಲ. ನಮ್ಮ ಜಮೀನಿಗೆ ತಂಟೆ ಮಾಡಬಾರದೆಂದು ಆ ದಾವೆಯನ್ನು ಹೂಡಿದ್ದರು ಎಂದರೆ ಸರಿಯಲ್ಲ. ಆ ದಾವೆಯಲ್ಲಿ ಪ್ರಸ್ತುತ ದಾವಾ ಸ್ವತ್ತನ್ನು ಅಳತೆಗೆ ಹಾಕಿದ್ದರು ಎಂದರೆ ಸರಿಯಲ್ಲ. ಸದರಿ ಅಳತೆಯಲ್ಲಿ ನಾನು ಮತ್ತು ಬಸವರಾಜು ರವರು ವಾದಿಗೆ ಸೇರಿದ ಜಮೀನನ್ನು ಒತ್ತುವರಿ ಮಾಡಿರುತ್ತೇವೆ ಎಂದು ವರದಿ ಬಂದಿರುತ್ತದೆ ಎಂದರೆ ಸರಿಯಲ್ಲ. ಸದರಿ ಒತ್ತುವರಿ ತೆರವು ಮಾಡಲು ತಹಶೀಲ್ದಾರ್ ರಿಗೆ ಅರ್ಜಿ ನೀಡಿದ್ದೇವು ಎಂದರೆ ಸರಿಯಲ್ಲ. ತಹಶೀಲ್ದಾರ್ ರ ಆದೇಶಕ್ಕೆ ನಾನು ಮನ್ನಣೆ ಕೊಡದೇ ಇದ್ದ ಕಾರಣ ಈ ದಾವೆಯನ್ನು ವಾದಿಗಳು ಹೂಡಿರುತ್ತಾರೆ ಎಂದರೆ ಸರಿಯಲ್ಲ.

ದಿನಾಂಕ: 19.11.2018 ರಲ್ಲಿ ಈ ಜಮೀನಿನ ಸರ್ವೆಯಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ಕಾಲದಲ್ಲಿ ನಾನು ತಕರಾರು ಮಾಡಿದ ಕಾರಣ ಪೊಲೀಸರವರ protection ಪಡೆದು ಸದರಿ ಅಳತೆ ಮಾಡಲಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಅಳತೆ ಕಾಲದಲ್ಲಿ ಒತ್ತುವರಿ ತೆರವುಗೊಳಿಸಿ ಕಲ್ಲುಕುಚ್ಚು ನೆಡಲು ವಾದಿ ಸ್ಥಳಕ್ಕೆ ಬಂದಿದ್ದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಾನು ವಾದಿಗಳ ಮೇಲೆ ಹಲ್ಲೆ ಮಾಡಿ ರಕ್ತಗಾಯಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಇದರ ಮೇಲೆ ಒಂದು ಕ್ರಿಮಿನಲ್ ಮೊಕದ್ದಮೆ ಹೂಡಲಾಗಿತ್ತು ಎಂದರೆ ಸಾಕ್ಷಿ ಅದು ಸುಳ್ಳು ದೂರಾಗಿರುತ್ತದೆ ಎಂದು ನುಡಿಯುತ್ತಾರೆ. ಈಗ ಸದರಿ ಜಮೀನು ಸ.ನಂ. 1/1, ಸ.ನಂ. 1/2 ಮತ್ತು ಸ.ನಂ. 1/3 ಎಂದು ಪೋಡಾಗಿರುತ್ತದೆ ಎಂದರೆ ಸಾಕ್ಷಿ ಎರಡು ಪೋಡಿಯಾಗಿರುತ್ತದೆ ಎಂದು ನುಡಿಯುತ್ತಾರೆ. ಸ.ನಂ. 1/1 ರಲ್ಲಿ 3 ಎಕರೆ 21 ಗುಂಟೆ ಇದ್ದು, ಸ.ನಂ. 1/3 ರಲ್ಲಿ 19 ಗುಂಟೆ ಜಮೀನು ಇರುತ್ತದೆ ಎಂದರೆ ಸಾಕ್ಷಿ ಸದರಿ ಜಮೀನಿಗೆ ಅವರವರ ಸ್ವಾಧೀನಕ್ಕೆ compound ಹಾಕಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಸ.ನಂ. 1/2 ಕ್ಕೆ ಯಾವುದೇ compound ಹಾಕಲಾಗಿರುವುದಿಲ್ಲ ಎಂದರೆ ಸರಿಯಲ್ಲ.

ಪ್ರಭಾರಾಧ್ಯ ರವರಿಗೆ ಅವರ ಹೆಸರಿನಲ್ಲಿ 4 ಎಕರೆ ಜಮೀನು ಇರುತ್ತದೆ ಎಂದರೆ ಸರಿ. ಅದಕ್ಕೆ ರಸ್ತೆ ಹೋಗಿರುತ್ತದೆ ಎಂದು ನುಡಿಯುತ್ತಾರೆ. ಸರ್ಕಾರಿ ಕಾಲುದಾರಿಗೆ ಕೇವಲ ಒಂದು ಗುಂಟೆ

ಜಮೀನು ಮಾತ್ರ ಸ.ನಂ. 1/1 ರಲ್ಲಿ ಹೋಗಿರುತ್ತದೆ ಎಂದರೆ ಸರಿಯಲ್ಲ. ನನಗೆ ಸದರಿ ಸ್ಥಳಕ್ಕೆ ಬಂದು ಸರ್ವೆ ಮಾಡಿ ಅಳತೆ ಮಾಡಲಾಗಿರುತ್ತದೆ ಎಂದರೆ ಸಾಕ್ಷಿ ನನಗೆ ಯಾವುದೇ ನೋಟೀಸ್ ಬಂದಿರುವುದಿಲ್ಲ ಎಂದು ನುಡಿಯುತ್ತಾರೆ. ನನಗೆ ನೋಟೀಸ್ ಬರದೇ ಇದ್ದ ಕಾರಣ ಸದರಿ ಸರ್ವೆ ರಿಪೋರ್ಟ್ ನ್ನು ನೋಡಿರುವುದಿಲ್ಲ. ಸದರಿ ಸರ್ವೆ ರಿಪೋರ್ಟ್ ನಲ್ಲಿ ನಾನು ವಾದಿಗೆ ಸೇರಿದ ಜಮೀನನ್ನು ಒತ್ತುವರಿ ಮಾಡಿರುತ್ತೇನೆ ಎಂದು ಬಂದಿರುತ್ತದೆ ಎಂದರೆ ಸುಳ್ಳು. ನಾನು ಹೇಳಿದ ಜಮೀನಿನಲ್ಲಿ ಸರ್ಕಾರಿ ರಸ್ತೆ ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಸರ್ಕಾರಿ ರಸ್ತೆಗೆ ಜಮೀನು ಹೋಗಿರುತ್ತದೆ ಎಂದು ನಾನು ಹೇಳಿರುವುದು ಸುಳ್ಳಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ರಸ್ತೆ ಉಪಯೋಗಿಸುತ್ತಿದ್ದೇವೆಂದು ನಾವು ಒಂದು ದಾವೆಯನ್ನು ಹೂಡಿದ್ದೇವು ಎಂದರೆ ನಾವು ಹೂಡಿರುವುದಿಲ್ಲ, ನಮ್ಮ ಪಕ್ಕದ ಜಮೀನಿನವರು ಒಂದು ದಾವೆಯನ್ನು ಹೂಡಿದ್ದರು ಎಂದು ನುಡಿಯುತ್ತಾರೆ. ಸದರಿ ದಾವೆ ವಜಾ ಆಗಿರುತ್ತದೆ ಎಂದರೆ ಗೊತ್ತಿಲ್ಲ.

ನಿ ಪಿ 25 ಸರ್ವೆ ರವರು ಕೊಟ್ಟಿರುವ ವರದಿ ಎಂದರೆ ನನಗೆ ಗೊತ್ತಿಲ್ಲ. ನಿ ಪಿ 25 ರಲ್ಲಿ ನಾನು ಮತ್ತು ಬಸವರಾಜಯ್ಯ ನವರು ಒತ್ತುವರಿ ಮಾಡಿರುವುದಕ್ಕೆ ಗುರುತು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಈ ದಿನ ನ್ಯಾಯಾಲಯದಿಂದ ದಾವಾ ಸ್ವತ್ತನ್ನು ಅಳತೆ ಮಾಡಿಸಲು ನಮ್ಮ ಎಲ್ಲ ಅಣ್ಣ ತಮ್ಮಂದಿರು ಒಪ್ಪಿದರೆ ನನಗೆ ಯಾವುದೇ ಅಭ್ಯಂತರ ಇರುವುದಿಲ್ಲ. ನಾನು ವಾದಿಗೆ ಸೇರಿದ ಜಮೀನನ್ನು ಒತ್ತುವರಿ ಮಾಡಿರುವ ಕಾರಣ ಸತ್ಯ ಗೊತ್ತಾಗುತ್ತದೆ ಎಂದು ಜಮೀನಿನ ಅಳತೆ ಮಾಡಿಸಲು ಒಪ್ಪುತ್ತಿಲ್ಲ ಎಂದರೆ ಸರಿಯಲ್ಲ. ನಾನು 19 ಗುಂಟೆ ಮತ್ತು ಬಸವರಾಜು ರವರು 17 ಗುಂಟೆ ಒತ್ತುವರಿ ಮಾಡಿರುತ್ತೇವೆ ಎಂದು ದಾವೆಯನ್ನು ವಾದಿಗಳು ಹೂಡಿರುತ್ತಾರೆ ಎಂದರೆ ಸರಿ. ಒತ್ತುವರಿ ಆಗಿದೆ ಎಂದು ಸರ್ವೆ ವರದಿಯ ಆಧಾರದ ಮೇಲೆ ಈ ದಾವೆಯನ್ನು ವಾದಿಗಳು ಹೂಡಿರುತ್ತಾರೆ ಎಂದರೆ ಸರಿ. ಒತ್ತುವರಿಯನ್ನು ಬಿಟ್ಟುಕೊಡಬೇಕೆಂದು ಈ ದಾವೆಯನ್ನು ಹೂಡಲಾಗಿರುತ್ತದೆ ಎಂದರೆ ಸುಳ್ಳು. ನಾನು ದಾವಾ ಬಿ ಷೆಡ್ಯೂಲ್ ಸ್ವತ್ತನ್ನು ಒತ್ತುವರಿ ಮಾಡಿರುತ್ತೇನೆ ಎಂದರೆ ಸುಳ್ಳು.

**ಮರುವಿಚಾರಣೆ : ಇಲ್ಲ**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ.**